**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 2134 |
| **ಸದಸ್ಯರ ಹೆಸರು** | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 25.03.2026 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ನಡುಗಡ್ಡೆಯ ಪ್ರದೇಶದಲ್ಲಿ ಕೃಷ್ಣಾ ನದಿಯ ಮಹಾಪೂರದಿಂದ ಕಂಕನವಾಡಿ ನಡುಗಡ್ಡೆಯ ಜನರಿಗೆ ಪ್ರಯಾಣಕ್ಕೆ ಹಾಗೂ ಸದರಿ ಭಾಗದಲ್ಲಿ ಬೆಳೆದ ಕಬ್ಬು ಹಾಗೂ ಇತರೆ ಬೆಳೆಗಳನ್ನು ಸಾಗಿಸಲು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; | ಹೌದು.<br>ಪ್ರಸ್ತುತ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ನಡುಗಡ್ಡೆಗೆ ಜನ ಮತ್ತು ಬೈಕ್‌ಗಳನ್ನು ಸಾಗಿಸಲು ಕಾರ್ಯನಿರ್ವಾಹಕ ಇಂಜಿನೀಯರ್, ಕೃಷ್ಣಾ ಮೇಲ್ದಂಡೆ ಯೋಜನೆ ಪುನರ್ವಸತಿ ವಿಭಾಗ, ನಂಬರ್-3 ಕಡಕೋಳ ಜಮಖಂಡಿ ರವರು, ಎರಡು ಅಲ್ಯೂಮಿನಿಯಂ ಯಾಂತ್ರಿಕ ನಾವೆಗಳನ್ನು ಕಂಕನವಾಡಿ ಗ್ರಾಮ ಪಂಚಾಯತ್ ರವರಿಗೆ ಪೂರೈಸಿದ್ದು, ಕಂಕನವಾಡಿ ಗ್ರಾಮ ಪಂಚಾಯತ್ ವತಿಯಿಂದ ನಿರ್ವಹಿಸಲಾಗುತ್ತಿದೆ.<br>ಕರ್ನಾಟಕ ಜಲಸಾರಿಗೆ ಮಂಡಳಿಯ ವತಿಯಿಂದ ರೂ.350.00 ಲಕ್ಷದ ಅಂದಾಜು ವೆಚ್ಚದಲ್ಲಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ನಡುಗಡ್ಡೆಗೆ ಬಾರ್ಜ್ ನಿರ್ಮಿಸಲು (ಉದ್ದ15 ಮೀ. X ಅಗಲ 6 ಮೀ. ಸಾಮರ್ಥ್ಯ- 30 ಪ್ರಯಾಣಿಕರು, 1 ಟ್ರಕ್, 2 ಫೋರ್ ವೀಲರ್ ಮತ್ತು 12 ದ್ವಿಚಕ್ರ ವಾಹನ, ಇಂಜಿನ್ ಸಾಮರ್ಥ್ಯ- 2 x 120 HP) ಯೋಜನೆಗೆ 2025-26 ನೇ ಸಾಲಿನ ಕ್ರಿಯಾಯೋಜನೆಯ ಲೆಕ್ಕ ಶೀರ್ಷಿಕೆ: 5051-80-001-0-01-132 ಅಡಿಯಲ್ಲಿ ಅನುಮೋದನೆ ನೀಡಲಾಗಿದೆ. |
| ಆ) | ಸದರಿ ನಡುಗಡ್ಡೆಯ ಪ್ರದೇಶದಲ್ಲಿ ದೊಡ್ಡ ದೋಣಿಯನ್ನು ನೀಡಲು ಇರುವ ಅಡಚಣೆಗಳೇನು, ಸೂಕ್ತ ಕಾರಣಗಳಿಂದ ವಿವರಿಸಿ ಎಲ್‌ಸಿಟಿ ಬಾರ್ಜ / ಮಿನಿ ಎಲ್‌ಸಿಟಿ ಬಾರ್ಜ ನೀಡುವ ಚಿಂತನೆ ಸರ್ಕಾರದ ಮುಂದಿದೆಯೇ; ಯಾವ ಕಾಲಮಿತಿಯೊಳಗೆ ನೀಡಲಾಗುವುದು; | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ನಡುಗಡ್ಡೆಯ ಪ್ರದೇಶದಲ್ಲಿ ದೊಡ್ಡ ದೋಣಿ ಸೌಕರ್ಯ ಕಲ್ಪಿಸಲು ಯಾವುದೇ ಅಡಚಣೆ ಇರುವುದಿಲ್ಲ.<br>ಇಂತಹ ಕಾಮಗಾರಿಗಳಿಗೆ ಮಂಜೂರಾದ ದರಪಟ್ಟಿಯಲ್ಲಿ ದರಗಳು ಲಭ್ಯವಿಲ್ಲದ ಕಾರಣ ಸ್ಪರ್ಧಾತ್ಮಕ ದರಗಳನ್ನು ಪಡೆಯಲು ದಿನಾಂಕ: 17.11.2025 ರಂದು Expression of Interest (EOI) ಆಹ್ವಾನಿಸಿದ್ದು, ಸ್ಪರ್ಧಾತ್ಮಕವಾಗಿ ಅತಿ ಕಡಿಮೆ ದರವನ್ನು ನಮೂದಿಸಿದ ಬಿಡ್ಡುದಾರರ ದರವನ್ನು ಪರಿಗಣಿಸಿ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ. |

| | | |
|---|---|---|
| ಇ) | ಕಂಕನವಾಡಿ ನಡುಗಡ್ಡೆಗೆ ರಸ್ತೆ ಸಂಪರ್ಕ ಇರದ ಕಾರಣ ಹಾಗೂ ರೈತರ ಹಿತದೃಷ್ಟಿಯಿಂದ ದೊಡ್ಡ ಎಲ್‌ಸಿಟಿ ಬಾರ್ಜ / ಮಿನಿ ಎಲ್‌ಸಿಟಿ ಬಾರ್ಜ ನೀಡಿ ರೈತರ ಹಿತ ಕಾಪಾಡಲು ಸರ್ಕಾರದ ನಿಲುವೇನು; | ಸ್ಥಳೀಯ ರೈತರು ಹಾಗೂ ಜನಪ್ರತಿನಿಧಿಗಳು ಬಾರ್ಜ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕಬ್ಬು ಹಾಗೂ ಇತರೆ ಸಾಮಗ್ರಿಗಳನ್ನು ಸಾಗಿಸುವ ವಾಹನಗಳು ಏರುವ ಹಾಗೂ ಇಳಿಯುವ ಸಲುವಾಗಿ ಬಾರ್ಜ್‌ನ ವಿನ್ಯಾಸದಲ್ಲಿ ರ‍್ಯಾಂಪ್‌ನ್ನು ಬದಲಾವಣೆ ಮಾಡಿ ಬಾರ್ಜ್ ಚಾಲಕರ ಕ್ಯಾಬಿನ್ ಅನ್ನು ಎರಡು ಬದಿ ಬರುವ ಹಾಗೆ ಮಾರ್ಪಡುಗಳನ್ನು ಅಳವಡಿಸುವಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.<br><br>ಅದರಂತೆ, ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಬಾರ್ಜ್‌ನ್ನು ಮರು ವಿನ್ಯಾಸಗೊಳಿಸಲು, ಬಾರ್ಜ್‌ಗಳನ್ನು ನಿರ್ಮಿಸುವ ಪರಿಣಿತ ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಸೂಕ್ತ ವಿನ್ಯಾಸ ಪಡೆದು, ಬಾರ್ಜ್ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುವುದು. |
| ಈ) | ಈ ನಡುಗಡ್ಡೆಯ ರೈತರು ತಾವು ಬೆಳೆದ ಬೆಳೆಗಳನ್ನು ಸಾಗಿಸಲು ನದಿ ದಾಟಿ ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ನೋವಿನ ಸಂಗತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಬಂದಿದ್ದರೆ ಈ ಕುರಿತು ಸರ್ಕಾರದ ಸ್ಪಷ್ಟನೆ ಏನು; (ವಿವರ ನೀಡುವುದು) ನಡುಗಡ್ಡೆ ಎರಡು ಬದಿ ರ‍್ಯಾಂಪ್ ನಿರ್ಮಾಣದ ಕುರಿತು ಸರ್ಕಾರದ ನಿಲುವೇನು; ಇದರ ನಿರ್ಮಾಣ ಕಾಮಗಾರಿಗೆ ಅನುದಾನ ಒದಗಿಸಲಾಗಿದೆಯೇ; ಅನುದಾನ ಒದಗಿಸಲಾಗಿದ್ದಲ್ಲಿ ಎಷ್ಟು ಅನುದಾನ ನೀಡಲಾಗಿದೆ; ಯಾವಾಗ ನೀಡಲಾಗಿದೆ? | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ನಡುಗಡ್ಡೆಯ ಪ್ರದೇಶದ ಸಾರ್ವಜನಿಕರ/ ರೈತರ ಹಿತದೃಷ್ಟಿಯನ್ನು ಗಮನಿಸಿ ಎಲ್.ಸಿ.ಟಿ. ಬಾರ್ಜ್‌ನ್ನು ಒದಗಿಸಲು ಕರ್ನಾಟಕ ಜಲಸಾರಿಗೆ ಮಂಡಳಿಯ 2025-26ನೇ ಸಾಲಿನ ಕ್ರಿಯಾಯೋಜನೆಯಲ್ಲಿ ರೂ. 350.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. |

**IDD 18 BNS 2026**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**